ಎರಡು ದಶಕಗಳ ಹಿಂದೆ ಇದು 800 ವಿದ್ಯಾರ್ಥಿಗಳಿಂದ ತುಂಬಿತುಳುಕುತ್ತಿದ್ದ ಶಾಲೆ. ಖಾಸಗಿ ಶಾಲೆಗಳ ಲಾಬಿ ಹಾಗೂ ಪೋಷಕರ ಆಂಗ್ಲಮಾಧ್ಯಮದ ವ್ಯಾಮೋಹದ ಕಾರಣ, 2014–15 ರ ಶೈಕ್ಷಣಿಕ ಸಾಲಿನಲ್ಲಿ ಈ ಶಾಲೆಯಲ್ಲಿನ ಮಕ್ಕಳ ಸಂಖ್ಯೆ 130ಕ್ಕೆ ಕುಸಿದಿತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ ಮತ್ತು ಸಮಾನ ಶಿಕ್ಷಣ ಹಾಗೂ ಮಾತೃಭಾಷಾ ಮಾಧ್ಯಮ ಶಿಕ್ಷಣಾಸಕ್ತರು ಶಾಲೆಯನ್ನು ಅಭಿವೃದ್ಧಿಪಡಿಸಲು ಪಣತೊಟ್ಟರು. ಶಾಲೆಯಲ್ಲಿನ ಮೂಲಭೂತ ಸೌಕರ್ಯಗಳನ್ನು ಸುಧಾರಿಸಿದರು. ಶಿಕ್ಷಕರಲ್ಲಿ ಹುರುಪು ಹೆಚ್ಚಿಸಲಾಯಿತು. ಪಾಲಕರ ಮನವೊಲಿಸುವ ಕೆಲಸವೂ ನಡೆಯಿತು. ಆಗಿನ ಪಾಂಡವಪುರದ ಉಪವಿಭಾಗಾಧಿಕಾರಿಗಳಾದ ಡಾ. ಎಚ್.ಎಲ್. ನಾಗರಾಜು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಎಸ್.ಟಿ. ಜವರೇಗೌಡ ಅವರ ನೇತೃತ್ವದಲ್ಲಿ ಹತ್ತಾರು ಕಾರ್ಯಕ್ರಮಗಳು ನಡೆದವು. ಅದರ ಪರಿಣಾಮವೆಂಬಂತೆ 2017–18ರಲ್ಲಿ ರಾಜ್ಯದಲ್ಲಿಯೇ ಸರ್ಕಾರಿ ಶಾಲೆಗಳ ಪೈಕಿ 1ನೇ ತರಗತಿಗೆ ಅತಿಹೆಚ್ಚು ಮಕ್ಕಳು ದಾಖಲಾದ ಶಾಲೆಯೆಂಬ ಕೀರ್ತಿಗೆ ಈ ಶಾಲೆ ಪಾತ್ರವಾಗಿದೆ. ಈ ವರ್ಷ 1ನೇ ತರಗತಿಗೆ 111 ಮಕ್ಕಳು ದಾಖಲಾಗಿದ್ದಾರೆ.

ಶಿಕ್ಷಣದ ವ್ಯಾಪಾರೀಕರಣದಿಂದ ಕನ್ನಡದ ಒಲವು ಹೊರಟುಹೋಗುತ್ತಿದೆಯೇ ಹೊರತು ಇಂಗ್ಲಿಷ್‌ನ ದಾಳಿಯಿಂದಲ್ಲ. ಇಂಗ್ಲಿಷ್ ಬೇಡ ಎಂದು ಯಾರೂ ಹೇಳುವುದಿಲ್ಲ. ಆದರೆ ಕನ್ನಡವೇ ಬೇಡ ಎನ್ನುವ ಮನಸ್ಥಿತಿ ಬಹಳ ಅಪಾಯಕಾರಿ. ಕೇಂದ್ರ ಸರ್ಕಾರ ಈ ನಿಟ್ಟಿನಲ್ಲಿ ಯಾವುದೇ ಪ್ರಯತ್ನ ನಡೆಸದೇ ಯಾಕೆ ಕೈ ಕಟ್ಟಿ ಕುಳಿತಿದೆ ಎಂದೇ ಗೊತ್ತಾಗುತ್ತಿಲ್ಲ ಎನ್ನುತ್ತಾರೆ ವಾಸು.

### ಇಂಗ್ಲಿಷ್ ಕಲಿಯುವ ಧಾವಂತ

ಇಂಗ್ಲಿಷ್ ಕಲಿಯುವ ಧಾವಂತವನ್ನು ಪ್ರಶ್ನಿಸುವವರೂ ಇದ್ದಾರೆ. ಕನ್ನಡದಲ್ಲಿಯೇ ಕಲಿತು ವಿಶ್ವಮಾನ್ಯರಾದವರ ಪಟ್ಟಿಯನ್ನೂ ಮಾತೃಭಾಷೆಯಲ್ಲಿ ಕಲಿಯುವುದರಿಂದ ಉಂಟಾಗುವ ಲಾಭಗಳನ್ನೂ ಇವರು ಎದುರಿಗಿಡುತ್ತಾರೆ. ಉದ್ಯೋಗ ದೃಷ್ಟಿಯಿಂದ ಇಂಗ್ಲಿಷ್ ಬೇಕೆಂಬುದು ಒಂದು ವಾದವಾದರೆ, ಮಕ್ಕಳ ಮನೋವಿಕಾಸಕ್ಕೆ ಮಾತೃಭಾಷೆ ಕನ್ನಡ ಬೇಕು ಎಂಬ ಕಾಳಜಿ ಮತ್ತೊಂದೆಡೆ. 'ಕರ್ನಾಟಕದ ಹಳ್ಳಿಯಲ್ಲಿ ಕನ್ನಡ ಮಾಧ್ಯಮದಲ್ಲಿ ಕಲಿತು ದೆಹಲಿಯಲ್ಲಿ ಕೆಲಸ ಆರಂಭಿಸುವಾಗ ಹಿಂದಿ ಕಲಿತಿಲ್ಲ ಎನ್ನುವುದು ಸವಾಲಾಗಿ ಕಾಣುವುದಿಲ್ಲ. ಭಾಷೆಯೊಂದನ್ನು ಕಲಿತರಾಯಿತು ಎಂಬಂತೆ ಹಿಂದಿಯನ್ನು ಆರಾಮವಾಗಿ ಕಲಿಯುತ್ತೇವೆ. ಆದರೆ ಇಂಗ್ಲಿಷ್ ಕುರಿತು ಇಷ್ಟೊಂದು ಭಯವೇಕೆ ಎನ್ನುವುದು ಅರ್ಥವಾಗುವುದಿಲ್ಲ' ಎನ್ನುತ್ತಾರೆ ಮಂಗಳೂರಿನ ಸುರೇಶ್ ಕೆ.

## ತೀರ್ಪು ಎನ್ನುವ ತಡೆಗೋಡೆ



ಪ್ರೊ. ಪುರುಷೋತ್ತಮ ಬಿಳಿಮಲೆ

ದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾಲಯದಲ್ಲಿನ (ಜೆಎನ್‌ಯು) ಕನ್ನಡ ಅಧ್ಯಯನ ಪೀಠದಲ್ಲಿ ಪ್ರಾಧ್ಯಾಪಕರಾಗಿರುವ ಪ್ರೊ. ಪುರುಷೋತ್ತಮ ಬಿಳಿಮಲೆ ಅವರು ಇತ್ತೀಚೆಗಿನ ಜನಗಣತಿಯನ್ನು ಆಧರಿಸಿ ಭಾಷಾ ಶಿಕ್ಷಣವನ್ನು ಹೇಗೆ ವಿಶ್ಲೇಷಣೆ ಮಾಡುತ್ತಾರೆ.

2011ರ ಜನಗಣತಿಯ ಆಧಾರದ ಪ್ರಕಾರ ದೇಶದಲ್ಲಿ 19,549 ಮಾತೃಭಾಷೆಗಳಿವೆ. ಆ ಪೈಕಿ ಕನ್ನಡವೂ ಸೇರಿದಂತೆ 22 ಭಾಷೆಗಳಿಗೆ ಸಂವಿಧಾನದ ಅಂಗೀಕಾರ ಸಿಕ್ಕಿದೆ. ಅವುಗಳನ್ನು ರಾಜ್ಯಭಾಷೆ ಎಂದು ಪರಿಗಣಿಸಲಾಗಿದೆ. ಮಾತೃಭಾಷೆಯಲ್ಲಿ ಶಿಕ್ಷಣವನ್ನು ಕೊಡಬೇಕು ಎಂಬ ಆಗ್ರಹವನ್ನು ಜಾರಿಗೆ ತರುವುದು ಭಾರತದ ಮಟ್ಟಿಗೆ ಕಾರ್ಯಸಾಧುವಾದ ವಿಷಯವಲ್ಲ. ಇಷ್ಟೊಂದು ಭಾಷೆಗಳಲ್ಲಿ ಶಿಕ್ಷಣ ವ್ಯವಸ್ಥೆ ರೂಪಿಸುವುದು ಸುಲಭಕ್ಕೆ ಸಾಧ್ಯವಾಗುವ ಮಾತಲ್ಲ. ಆದ್ದರಿಂದ ರಾಜ್ಯಭಾಷೆಗಳಲ್ಲಿ 5ನೇ ತರಗತಿವರೆಗಿನ ಶಿಕ್ಷಣ ಕೊಡುವ ವ್ಯವಸ್ಥೆಯನ್ನು ಕಲ್ಪಿಸುವುದು ಕಷ್ಟದ ಮಾತಲ್ಲ. ನಮ್ಮ ದೇಶದ ನವಶಿಕ್ಷಣ ನೀತಿಯೂ ದೇಸೀ ಭಾಷೆಗಳ ರಕ್ಷಣೆಯು ಆಯಾ ರಾಜ್ಯ ಸರ್ಕಾರದ್ದು ಎಂದು ಹೇಳುತ್ತದೆ.

ರಾಜ್ಯಭಾಷೆಗಳಲ್ಲಿ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲೂ ಒಂದು ತೊಡಕಿದೆ. ಶಿಕ್ಷಣ ಮಾಧ್ಯಮದ ಹಕ್ಕು ಮಕ್ಕಳ ಪೋಷಕರಿಗೆ ಬಿಟ್ಟ ವಿಚಾರ ಎಂದು ಸುಪ್ರೀಂಕೋರ್ಟ್ ಸ್ಪಷ್ಟವಾಗಿ ಹೇಳಿದೆ. ಈ ತೀರ್ಪಿನ ಹಿನ್ನೆಲೆಯಲ್ಲಿ ನವಶಿಕ್ಷಣ ನೀತಿಯ ಆಶಯಗಳನ್ನು ಜಾರಿಮಾಡುವುದು ಸಾಧ್ಯವಿಲ್ಲ. ಈ ತೀರ್ಪು ಕೇವಲ ಕರ್ನಾಟಕಕ್ಕೆ ಮಾತ್ರವಲ್ಲ – ಪಂಜಾಬಿ, ಒಡಿಯಾ ಸೇರಿದಂತೆ ದೇಶದ ಎಲ್ಲ ಪ್ರಾದೇಶಿಕ ಭಾಷೆಗಳಿಗೆ ಅನ್ವಯಿಸುತ್ತದೆ. ಆ ಭಾಷೆಗಳಿಗೂ ಈ ತೀರ್ಪಿನ ಬಿಸಿ ತಟ್ಟಿದೆ. ರಾಜ್ಯದಲ್ಲಿ ಕನ್ನಡ ಕಲಿಸುವ ಸರ್ಕಾರಿ ಶಾಲೆಗಳು ಮುಚ್ಚುವ ಸ್ಥಿತಿ ಬರಲು ಈ ತೀರ್ಪೂ ಪರೋಕ್ಷವಾಗಿ ಕಾರಣ ಎಂದು ಹೇಳಬೇಕಾಗುತ್ತದೆ. ಈ ಅಂಶಗಳ ಕುರಿತು ಸಂಘಟನಾತ್ಮಕ ಚರ್ಚೆ ಮತ್ತು ಸಂವಾದದ ಅಗತ್ಯವಿದೆ ಎನ್ನುತ್ತಾರೆ ಪ್ರೊ. ಬಿಳಿಮಲೆ.


ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ದಕ್ಷಿಣ ಭಾರತದ ಜನರಲ್ಲಿ ಪ್ರಶಂಸೆಗಳಿಸಿರುವ ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ


ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಈಗಿನ ಕಾಲದಲ್ಲೂ ಜೀವಂತವಾಗಿರುವಂತಹ ಕೇರಳದ ಕೆಲವು ಪ್ರಾಚೀನ ವಿಸ್ಮಯ ವಿದ್ಯೆಗಳಿಂದ
ಕೇವಲ 5 ದಿನದಲ್ಲಿ
100% ಪರಿಹಾರ ಶತಸಿದ್ಧ
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
ಜೈಬಾಲಾಜಿ ಜ್ಯೋತಿಷ್ಯಂ ಬನಶಂಕರಿ ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ. ಬೆಂಗಳೂರು. 9620444460